(ಇ) ಭಟ್ಕಳದಲ್ಲಿ ಡಾ ಚಿತ್ತರಂಜನ್‌ರವರ ಕೊಲೆ ಕುರಿತು.

ಶ್ರೀ ವಿಶ್ವೇಶ್ವರ ಹೆಗಡೆ ಹಾಗೇರಿ (ಅಂಕೋಲ) :— ಮಾನ್ಯ ಅಧ್ಯಕ್ಷರೇ, ನಾನು ಗಮನ ಸೆಳೆಯುವ ಸೂಚನೆ ಮೂಲಕ ಈ ಅಧಿವೇಶನ ಪ್ರಾರಂಭದಲ್ಲೇ ಭಟ್ಕಳದಲ್ಲಿ ನಡೆದಂಥ ಗಲಭೆಯ ಹಿನ್ನೆಲೆಯಲ್ಲಿ, ಜಗನ್ನಾಥ ಶೆಟ್ಟಿ ಆಯೋಗ ಮತ್ತು ರಾಮಚಂದ್ರಯ್ಯ ಆಯೋಗದ ವರದಿಯನ್ನು ಈ ಸದನಕ್ಕೆ ಮಂಡಿಸಬೇಕೆನ್ನುವ ವಿಷಯವನ್ನು ನಾನು ಕೊಟ್ಟಿದ್ದೇನೆ. ಅದು ಇದುವರೆಗೂ ಗಮನ ಸೆಳೆಯುವ ಸೂಚನೆ ಮೂಲಕ ಅದು ಅನುಮೋದನೆಯಾಗಿ, ಸ್ವೀಕಾರವಾಗಿ ಇಲ್ಲಿ ಬರಲಿಲ್ಲ. ಹಾಗಾಗಿ ನನಗೆ ನೀವು ಇವತ್ತು ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

1.40 ಪಿ.ಎಂ.

ಮಾನ್ಯ ಅಧ್ಯಕ್ಷರೆ, ನಾನು ಗಮನ ಸೆಳೆಯುವ ಸೂಚನೆ ಮೂಲಕ ಈ ಅಧಿವೇಶನದ ಪ್ರಾರಂಭದಲ್ಲಿಯೇ ಭಟ್ಕಳದಲ್ಲಿ, ನಡೆದಂತಹ ಗಲಭೆ ಹಿನ್ನೆಲೆಯಲ್ಲಿ, ಜಗನ್ನಾಥ ಶೆಟ್ಟಿ ಆಯೋಗ ಮತ್ತು ರಾಮಚಂದ್ರಯ್ಯ ಅವರ ವರದಿಯನ್ನು ಈ ಸದನಕ್ಕೆ ಮಂಡಿಸಬೇಕು ಎನ್ನುವಂತಹ ವಿಷಯವನ್ನು ನಾನು ಕೊಟ್ಟಿದ್ದೇನೆ. ಅದು ಇದುವರೆಗೂ ಗಮನ ಸೆಳೆಯುವ ಸೂಚನೆ ಮೂಲಕ ಅನುಮೋದನೆ ಆಗಿ ಸ್ವೀಕಾರ ಆಗಿ ಬರಲಿಲ್ಲ. ಹಾಗಾಗಿ ನನಗೆ ನೀವು ಶೂನ್ಯ ವೇಳೆಯಲ್ಲಿ, ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು :— ಪ್ರಸ್ತಾಪ ಮಾಡಿ, ನಮ್ಮದೇನೂ ಅಭ್ಯಂತರ ಇಲ್ಲ. ಮಾನ್ಯ ವಿಶ್ವೇಶ್ವರ ಹೆಗಡೆ ಅವರದ್ದು ಆದಮೇಲೆ ಅವರೂ ಪ್ರಸ್ತಾಪ ಮಾಡಲಿ. ನಾವು ಆರು ಗಂಟೆಯವರೆಗೆ ಕುಳಿತುಕೊಳ್ಳೋಣ. ಎಲ್ಲಾ ಶೂನ್ಯವೇಳೆಯ ವಿಚಾರಗಳೂ ಇವತ್ತೇ ಮುಗಿದುಹೋಗಲಿ. ಪ್ರಸ್ತಾಪ ಆದಮೇಲೆ ನಾವು ಮುಕ್ತಾಯ ಮಾಡೋಣ. ನೀವು ಪ್ರಸ್ತಾಪ ಮಾಡಿ. ಮಾನ್ಯ ಸದಸ್ಯರು ಪ್ರಾರಂಭ ಮಾಡುವುದಕ್ಕೆ ಮುಂದೆ ಮಾನ್ಯ ಸಿಂಧ್ಯಾ ಅವರೇ ಮುಂದಿನ ವಾರದ ಅಜೆಂಡಾ ಏನು ಎಂದು ನಾವು ಯೋಚನೆ ಮಾಡಬೇಕಾಗಿದೆ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಅಧ್ಯಕ್ಷರೆ, ಬೇಸಿಕ್ ಡೌಟ್ ಇದೆ. ಅದೇನು ಅಂದರೆ ಮಾನ್ಯ ಸಂಸದೀಯ ವ್ಯವಹಾರ ಮಂತ್ರಿಗಳು ಈ ಕಡೆಗೆ ಗಮನ ಕೊಡಬೇಕು. ನನಗೆ ಒಂದು ಕನಿಷ್ಟ ತಿಳುವಳಿಕೆ ಬೇಕು. ಶೂನ್ಯ ವೇಳೆ ವಿಚಾರ ಆಗಿರುವುದರಿಂದ ಅಧಿವೇಶನ ಸೇರಿ ಇವತ್ತಿಗೆ 24-25 ದಿವಸಗಳು ಆಗಿವೆ. ಕಳೆದ ಅಧಿವೇಶನಕ್ಕೂ ಈ ಅಧಿವೇಶನಕ್ಕೂ ಬಂದಿರತಕ್ಕಂಥ ಸುಗ್ರೀವಾಜ್ಞೆಗಳು ಏನು ಇವೆ, ಆ

ಸುಗ್ರೀವಾಜ್ಞೆಗಳನ್ನು ತಾವು ಮಸೂದೆ ರೂಪದಲ್ಲಿ ಮಂಡಿಸಿ ತೆಗೆದುಕೊಂಡು ಬರುತ್ತಿದ್ದೀರಿ. ಒಂದು ಸುಗ್ರೀವಾಜ್ಞೆ ಹೊರಡಿಸಿರತಕ್ಕದ್ದು ಇನ್ನೂ ಮಸೂದೆ ರೂಪದಲ್ಲಿ ಬಂದಿಲ್ಲ. ನಮಗೆ ಇನ್ನೂ ಆ ಬಿಲ್ ಬಂದಿಲ್ಲ. ರೈಟ್ ಟು ಇನ್‌ಫರ್ಮೇಷನ್ ಬಿಲ್ ಏನು ಇದೆ? ಅದು ಇನ್ನೂ ಸಹಿತ ವಿಧಾನಸಭೆಯಲ್ಲಿ ಮಂಡನೆ ಮಾಡಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಕೌನ್ಸಿಲ್‌ನಲ್ಲಿ ಪ್ರಸ್ತಾಪ ನಡೆಯುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಇಲ್ಲಿ ಇನ್ನೂ ಇಂಟ್ರಡ್ಯೂಸ್ ಮಾಡಿಲ್ಲವಲ್ಲ ಏಕೆ?

ಅಧ್ಯಕ್ಷರು :— ಕೌನ್ಸಿಲ್‌ನಲ್ಲಿ ಇಂಟ್ರಡ್ಯೂಸ್ ಮಾಡಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಏನೇನು ರೈಟ್‌ಗಳು ಇವೆ ಎಂದು ನಮಗೆ ತಿಳಿದುಕೊಳ್ಳುವುದಕ್ಕೆ ಅನುಕೂಲ ಆಗುತ್ತದೆ. ಅದನ್ನು ಓದಲಿಕ್ಕೆ ಅನುಕೂಲ ಆಗುತ್ತದೆ. ಕೊನೆಯ ಘಳಿಗೆಯಲ್ಲಿ ಶುಕ್ರವಾರ ಬಂದು ರೈಟ್ ಟು ಇನ್‌ಫರ್ಮೇಷನ್ ಬಿಲ್ ಎಂದು ಹೇಳಿಬಿಟ್ಟರೆ ಪಾರದರ್ಶಕತೆ ಬಗ್ಗೆ ನಮಗೆ ಗೊತ್ತಾಗಬೇಕಲ್ಲ. ಆ ಬಿಲ್‌ನಲ್ಲಿ ಏನು ಇದೆ? ದಯವಿಟ್ಟು ಇನ್ನೂ ಏಕೆ ವಿಧಾನಸಭೆಯಲ್ಲಿ ಮಂಡಿಸಿಲ್ಲ ಎಂದು ನನಗೆ ಅರ್ಥ ಆಗುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :— ಅಲ್ಲಿ ಇಂಟ್ರಡ್ಯೂಸ್ ಆಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಇಲ್ಲಿ ಇಂಟ್ರಡ್ಯೂಸ್ ಮಾಡಬಾರದು ಎಂದು ಏನೂ ಇಲ್ಲವಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ :— ಸೈಮಲ್ಟೇನಿಯಸ್ ಆಗಿ ಅಲ್ಲಿ ಮುಗಿಸಿಕೊಂಡು ಬಂದ ಮೇಲಿ ಇಲ್ಲಿ ಚರ್ಚೆ ಮಾಡಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ತಾವೇನಾದರೂ ಅಮೆಂಡ್‌ಮೆಂಟ್‌ನ್ನು ಪ್ರಪೋಸ್ ಮಾಡಿದ್ದೀರಾ? ಅದು ಸುಗ್ರೀವಾಜ್ಞೆ, ಇದು Ordinance replacement Bill. I want to be educated.

ಅಧ್ಯಕ್ಷರು :— ಅಲ್ಲಿ ಒಂದು ಸಲ ಇಂಟ್ರಡೂಸ್ ಮಾಡಿದ ಮೇಲೆ ಇಲ್ಲಿ ನಾವು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಪಾಸ್ ಆಗಿ ಇಲ್ಲಿಗೆ ಅದು ಬರಲೇ ಬೇಕಲ್ಲ. ಅಲ್ಲಿ ಒಂದೇಕಡೆ ಪಾಸ್ ಆಗುವುದಿಲ್ಲವಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ನಮಗೇನೂ ತೊಂದರೆ ಇಲ್ಲ. ಈ ಸರ್ಕಾರದವರು ಅವರೇ ಡಂಗೂರ ಹೊಡೆದುಕೊಂಡವರು ನಾವು ಪಾರದರ್ಶಕ ಸರ್ಕಾರ ಎಂದು ಹೇಳಿ. Right to Information Bill ತರುತ್ತೇವೆಂತಲೂ ಇದೆ. ಗವರ್ನರ್‌ಗೆ ತೊಂದರೆ ಕೊಟ್ಟು

ಅರ್ಡಿನೆನ್ಸ್ ಮಾಡಿಕೊಂಡರು. ರೀಪ್ಲೇಸ್‌ಮೆಂಟ್ ಬಿಲ್ ಇನ್ನೂ ಏಕೆ ಇಂಟ್ರಡ್ಯೂಸ್ ಮಾಡಿಲ್ಲ. Let us be educated. ರಾಜ್ಯದ ಜನಕ್ಕೆ ಗೊತ್ತಾಗಬೇಕಲ್ಲ. ಅದಕ್ಕೋಸ್ಕರ ನಾನು ಕೇಳಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :— ಈಗಾಗಲೇ ಮಾನ್ಯ ಚಂದ್ರಶೇಖರ್ ಅವರು ಅದನ್ನು ಇಂಟ್ರಡ್ಯೂಸ್ ಮಾಡಿ ಮಾತನಾಡುತ್ತಿದ್ದಾರೆ. ಇಲ್ಲೂ ಬರುತ್ತದೆ. ತಮ್ಮ ಅಪ್ರೂವಲ್ ಆದ ಮೇಲೆಯೇ ಅದು ಕಾನೂನು ಆಗತಕ್ಕದ್ದು. ಇಲ್ಲದಿದ್ದರೆ ಹೇಗೆ ಕಾನೂನು ಆಗುತ್ತದೆ?

ಅಧ್ಯಕ್ಷರು :— ಮಾನ್ಯ ಸಿಂಧ್ಯಾ ಅವರೇ, ಮುಂದಿನ ವಾರದ ಅಜೆಂಡಾವನ್ನು ಏನು ತಯಾರು ಮಾಡಬೇಕು ಎಂಬ ಬಗ್ಗೆ ಹತ್ತು ನಿಮಿಷ ಸದನವನ್ನು ಮುಂದೂಡಿ ಹೋಗಿ ಮಾತನಾಡಬೇಕು ಎಂದು ಅಂದುಕೊಂಡಿದ್ದೇವೆ. ಒಂದು ಹತ್ತು ನಿಮಿಷ ಸದನವನ್ನು ಮುಂದೂಡೋಣ ಅಥವಾ ಮಧ್ಯಾಹ್ನ ಮತ್ತೆ ಸೇರೋಣ. ಈಗ ಮುಂದೂಡೋಣವೋ ಅಥವಾ ಮತ್ತೆ ಸೇರೋಣವೋ, ಹೇಗೆ ಮಾಡೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಎರಡು ಗಂಟೆಯವರೆಗೆ ಅವಕಾಶ ಕೊಡಿ.

ಅಧ್ಯಕ್ಷರು :— ನಾವು ಎರಡು ಗಂಟೆಗೆ ಸದನವನ್ನು ನಡೆಸೋಣ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ನಾನು ಬಹಳ ಪ್ರಮುಖವಾದಂತಹ ವಿಷಯ ಪ್ರಸ್ತಾಪ ಮಾಡುತ್ತಿದ್ದೇನೆ. ತಾವು ಈ ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಮಾನ್ಯ ಸಂಸದೀಯ ಸಚಿವರು ಮತ್ತು ಮಾನ್ಯಗೃಹ ಸಚಿವರು ಇಬ್ಬರೂ ಈ ಸಂದರ್ಭದಲ್ಲಿ ಇದ್ದಾರೆ. ಬಹಳ ಸಂತೋಷದ ವಿಷಯ.

(ಗೊಂದಲ)

ಶ್ರೀ ಡಿ.ವಿ. ಸದಾನಂದ ಗೌಡ :— ಕಳೆದ ಎರಡು ದಿವಸಗಳಿಂದ ತಾವು ಅಧಿವೇಶನದಿಂದ ಇರಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಬಹಳ ದಿವಸಗಳ ಮೇಲೆ ನಾವು ಸದನಕ್ಕೆ ಬಂದಿರುವ ಹಾಗೆ ಹೇಳುತ್ತಿದ್ದೀರಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಮಾನ್ಯ ಸಂಸದೀಯ ಸಚಿವರು ಇದ್ದಾರೆ. ಅವರಿಗೆ ಈ ಕಡೆಗೆ ಗಮನ ಇಲ್ಲದೇ ಹೋದ ಹಾಗೆ ಇರಬಾರದು ಇನ್ನು ಬಹಳ ಮುಖ್ಯವಾದ ವಿಷಯ ಇದೆ. ನಾನು ಅಧ್ಯಕ್ಷರಲ್ಲಿ ವಿನಂತಿ ಮಾಡುತ್ತೇನೆ. ಮಾನ್ಯ ಸಂಸದೀಯ ಸಚಿವರು ಈ ಕಡೆಗೆ ಗಮನ ಕೊಡಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ಸಂಸದೀಯ ಸಚಿವರು ಎಂದರೆ ಅವರು ಹೆಸರು ಇಟ್ಟಿದ್ದರೇನು? ಜೆಂಡೂಬಾಮ್ ಎಂದು..

(ಗೊಂದಲ)

ಅಧ್ಯಕ್ಷರು :— ತಾವೆಲ್ಲ ಹೇಗೆ ಅವಕಾಶಕ್ಕೆ ಎದ್ದು ನಿಂತಿದ್ದೀರೋ ಹಾಗೆಯೇ ಅವರು ಎದ್ದು ನಿಂತಿದ್ದಾರೆ. ನಾನು ಅವರಿಗೆ ಅವಕಾಶ ಕೊಡಬೇಕೋ ಬೇಡವೋ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ನೀವು ನನಗೆ ಅವಕಾಶವನ್ನು ಕೊಟ್ಟಾಯಿತು. ಮಾನ್ಯ ಖರ್ಗೆಯವರು ಸಂಸದೀಯ ಸಚಿವರು ಎಂದು ಹೇಳಿ ಆಯಿತು. ಮಧ್ಯದಲ್ಲಿ ತೊಂದರೆಬೇಡ.

ಅಧ್ಯಕ್ಷರು :— ಒಂದು ನಿಮಿಷ ತಡೆಯಿರಿ. ಅವರು ಹೇಳುತ್ತಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಸಾರ್, ನೀವು ನನಗೆ ಅವಕಾಶವನ್ನು ಕೊಟ್ಟು ಮತ್ತೆ ಅವರಿಗೆ ಏಕೆ ಮಧ್ಯದಲ್ಲಿ ಅವಕಾಶ ಕೊಡುತ್ತೀರಿ? ಈಗ ಭಟ್ಕಳದಲ್ಲಿನ ವಿಚಾರ ಹೇಳುತ್ತಿದ್ದೇನೆ. ನಾನು 70ರ ದಶಕದ ವಿಚಾರ, 80ರ ದಶಕದ ವಿಚಾರ ಹೇಳುವುದಿಲ್ಲ. 1991ನೇ ವರ್ಷದಿಂದ 1993ನೇ ಇಸವಿಯ ತನಕ ಆ ಸರ್ಕಾರದ ಸಂದರ್ಭದಲ್ಲಿ ಭಟ್ಕಳದಲ್ಲಿ ಬಹಳ ದೊಡ್ಡ ಕೋಮು ಗಲಭೆಗಳು ನಡೆಯಿತು. ಆ ಕೋಮು ಗಲಭೆಗಳ ವಿವರಗಳಿಗೂ ನಾನು ಹೋಗಬಯಸುವುದಿಲ್ಲ. ಯಾವ್ಯಾವ ರೀತಿ ಅಲ್ಲಿ ಘಟನೆಗಳು ನಡೆಯಿತು? ಅಲ್ಲಿ ಎಷ್ಟು ಜನ ಸತ್ತರು? ಅಲ್ಲಿ ಎಷ್ಟು ಜನ ಮನೆ-ಮಠಗಳನ್ನು ಕಳೆದುಕೊಂಡರು? ಆಸ್ತಿಪಾಸ್ತಿ ಎಷ್ಟು ನಷ್ಟ ಆಯಿತು? ಇತ್ಯಾದಿ ವಿವರಕ್ಕೆ ಹೋಗುವುದಿಲ್ಲ. ಅದರಿಂದಾಗಿ ಜಿಲ್ಲೆಯಲ್ಲಿ, ರಾಜ್ಯದಲ್ಲಿ ಯಾವ ರೀತಿಯಾಗಿ ಕೋಮು ಉದ್ವೇಶದ ಭಾವನೆ ಉಂಟಾಯಿತು? ಇತ್ಯಾದಿ ಎಲ್ಲ ವಿವರಗಳಿಗೆ ನಾನು ಹೋಗುವುದಿಲ್ಲ. ಆದರೆ ಅದನ್ನು ತನಿಖೆ ಮಾಡುವುದಕ್ಕೋಸರವಾಗಿ ಹಿಂದೆ ನಿಮ್ಮದೇ ಸರ್ಕಾರ, ನಿಮ್ಮದೇ ಮುಖ್ಯಮಂತ್ರಿಗಳು ಆಗಿದ್ದಂತಹ ಮಾನ್ಯ ವೀರಪ್ಪ ಮೋಯಿಲಿಯವರು 16.9.93ಕ್ಕೆ ನಿವೃತ್ತ ನ್ಯಾಯಾಧೀಶರಾದಂತಹ ಶ್ರೀಮಾನ್ ಜಗನ್ನಾಥ ಶೆಟ್ಟಿಯವರ ಒಂದು ತನಿಖಾ ಆಯೋಗವನ್ನು ರಚನೆ ಮಾಡಿದರು. ಅದು 28-2-97ಕ್ಕೆ ಆಯೋಗ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತು. ಇಡೀರಾಜ್ಯದಲ್ಲಿ ಬಹುಶಃ ನ್ಯಾಯಾಂಗ ವರದಿಗಳ ಬಗ್ಗೆ ನಾವು ಯೋಚನೆ ಮಾಡಿದರೆ, ಇದುವರೆಗೆ ಎಷ್ಟು ನ್ಯಾಯಾಂಗ ವರದಿಗಳಿಗಾಗಿ ಎಷ್ಟು ಆಯೋಗಗಳನ್ನು ಸರ್ಕಾರ ನೇಮಿಸಿತ್ತು? ಎಷ್ಟು ವರದಿಗಳನ್ನು ಕೊಟ್ಟಿದೆ ಎಂದು ಯೋಚನೆ ಮಾಡಿದರೆ, ಜಗನ್ನಾಥ ಶೆಟ್ಟಿ ಆಯೋಗ ತನ್ನ ವರದಿಯನ್ನು ಸಂಪೂರ್ಣ ಮಾಡಿ ಕೊಡಲಿಕ್ಕೆ ಖರ್ಚು ಮಾಡಿದ್ದಾರೆ. ಸರ್ಕಾರದಿಂದ 42 ಲಕ್ಷ ರೂಪಾಯಿ ಖರ್ಚಾಗಿದೆ. ಮೂರೂವರೆ ವರ್ಷ,

ಸುಮಾರು 195 ದಿನ ಬೆಳಿಗ್ಗೆಯಿಂದ ಸಂಜೆ ತನಕ ಈ ಆಯೋಗ ತನ್ನ ವರದಿಯನ್ನು ಸಂಪೂರ್ಣ ಮಾಡಿ ಕೊಡಲಿಕ್ಕೆ ಖರ್ಚು ಮಾಡಿದ್ದಾರೆ. ಸರ್ಕಾರದಿಂದ 42 ಲಕ್ಷ ರೂಪಾಯಿ ಖರ್ಚಾಗಿದೆ. ಮೂರೂವರೆ ವರ್ಷ ಸುಮಾರು 195 ದಿನ ಬೆಳಿಗ್ಗೆಯಿಂದ ಸಂಜೆ ತನಕ ಈ ಆಯೋಗ ತನ್ನ ವರದಿಯನ್ನು ಸಿದ್ಧಪಡಿಸುವುದಕ್ಕೆ ಸಮಯ ತೆಗೆದುಕೊಂಡಿದೆ. ಇದರಲ್ಲಿ 1923 ಪುಟದ ಸಾಕ್ಷಿ ಇತ್ಯಾದಿಗಳನ್ನು ಸಂಗ್ರಹ ಮಾಡಿ ಸುಮಾರು 25 ದಿನಗಳ ಕಾಲ ಅವಿರತವಾಗಿ ವಕೀಲರುಗಳ ವಾದಗಳನ್ನು ಆಯೋಗ ಕೇಳಿದೆ. ದೊಡ್ಡ ಪ್ರಮಾಣದಲ್ಲಿ, ಇದರೊಳಗೆ ಹಿಂದೂಗಳು ಇರಬಹುದು ಯಾರ್ಯಾರು ಅರ್ಜಿ ಸಲ್ಲಿಸಿದ್ದರು ಮುಸ್ಲೀಂ ಇರಬಹುದು, ಇವರೆಲ್ಲರ ಅರ್ಜಿಗಳನ್ನು ಪರಿಶೀಲನೆ ಮಾಡಿ ಸಮಗ್ರವಾದಂತಹ ತನಿಖೆ ಮಾಡಿ 28-2-97ಕ್ಕೆ ಜಗನ್ನಾಥ ಶೆಟ್ಟಿ ಆಯೋಗ ತನ್ನ ವರದಿಯನ್ನು ಕೊಟ್ಟಿತು. ಆದರೆ ಈಗ ಮಾನ್ಯ ಸಂಸದೀಯ ಸಚಿವರು ಹೇಳಬೇಕು. ಒಂದು ಆಯೋಗ ವರದಿಯನ್ನು ಸರ್ಕಾರಕ್ಕೆ ಕೊಟ್ಟ ನಂತರ ಆರು ತಿಂಗಳಲ್ಲಿ ಸದನದಲ್ಲಿ ವರದಿಯನ್ನು ಮಂಡಿಸಬೇಕು ಮತ್ತು ಆಕ್ಷನ್ ಟೇಕನ್ ರಿಪೋರ್ಟ್‌ನ್ನು ಸಹ ಮಂಡಿಸಬೇಕು ನಾನು ಹಿರಿಯರಿಂದ ಕೇಳಿ ತಿಳಿದಿದ್ದೇನೆ. ಮಾನ್ಯ ಸಂಸದೀಯ ಸಚಿವರಾಗಿ ನೀವು ಇದಕ್ಕೆ ಉತ್ತರ ಹೇಳಿ. ನೀವು ಆರು ತಿಂಗಳಿಗೆ ಮಂಡಿಸಬೇಕಾಗಿದ್ದನ್ನು ಇವತ್ತಿಗೆ ಐದು ವರ್ಷಕ್ಕೆ ಬಂತು. ಇದುವರೆಗೆ ವರದಿಯನ್ನು ಏಕೆ ಮಂಡಿಸಲಿಲ್ಲ? ಮಂಡಿಸದೇ ಇರುವುದಕ್ಕೆ ನನಗೆ ಅನೇಕ ರೀತಿಯಿಂದ, ಬೇರೆ ಬೇರೆ ಕಡೆಯಲ್ಲಿ ಪತ್ರಿಕೆಯಲ್ಲಿ, ಜನರು ಹೋದಲ್ಲಿ ಬಂದಲ್ಲಿ ತಮ್ಮ ತಮ್ಮ ಭಾವನೆಗಳನ್ನು ಬೇರೆ ಬೇರೆ ರೀತಿಯಾದಂತಹ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಅನೇಕರು ಹೇಳುತ್ತಾರೆ. ಯಾವುದೋ ಒತ್ತಡ ಇದೆ, ಇದನ್ನು ಮಂಡಿಸಬಾರದು ಎಂದು ಸರ್ಕಾರದ ಮೇಲೆ ಒತ್ತಡ ಇದೆ, ಹಾಗಾಗಿ ಮಂಡಿಸುತ್ತಿಲ್ಲ ಎಂದು. ಇನ್ನು ಯಾರೋ ಹೇಳುತ್ತಾರೆ. ರಾಷ್ಟ್ರ ದ್ರೋಹಿಗಳ ಮೇಲೆ, ಅಲ್ಪಸಂಖ್ಯಾತರು, ಉಗ್ರಗಾಮಿಗಳ ಕುರಿತಂತೆ.

ಅಧ್ಯಕ್ಷರು :— ವರದಿಯನ್ನು ಏಕೆ ಮಂಡಿಸಲಿಲ್ಲ ಎಂದು ಕೇಳಿ. ನೀವು ಡೀಟೇಲ್‌ಗೆ ಹೋಗಬೇಡಿ. ಡೀಟೇಲ್ ಏಕೆ ಹೇಳುತ್ತಿದ್ದೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ವರದಿ ಮಂಡಿಸುತ್ತಾರೋ ಇಲ್ಲವೋ ಅಷ್ಟು ಹೇಳಲಿ.

ಅಧ್ಯಕ್ಷರು :— ರಿಪೋರ್ಟ್‌ನ್ನು ಏಕೆ ಮಂಡಿಸಲಿಲ್ಲ, ಯಾವಾಗ ಮಂಡಿಸುತ್ತಾರೆ ಎಂದು ಅಷ್ಟು ಕೇಳಿದರೆ ಮುಗಿದು ಹೋಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಏಕೆ ಕೇಳಬೇಕಾಗಿ ಬಂದಿದೆ ಅಂದರೆ ಭಟ್ಕಳ : ಉತ್ತರ ಕನ್ನಡ ಜಿಲ್ಲೆಯಲ್ಲಿ ....

ಅಧ್ಯಕ್ಷರು :— ನಾನು ಸಂಪೂರ್ಣ ವಿವರ ಕೇಳುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಪರವಾಗಿಲ್ಲ. ನಾನು ಏಕೆ ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸಿದೆ ಎಂದರೆ ಭಟ್ಕಳ, ಉತ್ತರ ಕನ್ನಡ ಜಿಲ್ಲೆಯಲ್ಲಿರುವಂತಹ ಕೇಂದ್ರ ನಮ್ಮ ರಾಜ್ಯದಲ್ಲಿಯೇ ಒಂದು ಐಎಸ್‌ಐ ಚಟುವಟಿಕೆ ನಡೆಯುತ್ತಿರುವಂತಹ ಒಂದು ಭಯಾನಕ ಕೇಂದ್ರ ಆಗಿದೆ. ಸರ್ಕಾರಕ್ಕೆ ಇದರ ಬಗ್ಗೆ ಮಾಹಿತಿ ಇದೆ. ಮಾನ್ಯ ಗೃಹ ಸಚಿವರಿಗೆ ಸಂಪೂರ್ಣವಾದಂತಹ ಮಾಹಿತಿ ಇದೆ. ಏಕೆಂದರೆ ಪತ್ರಿಕೆಗಳಲ್ಲಿ ಬಂದಿದೆ. ಅಲ್ಲಿ ಐಎಸ್‌ಐ ಚಟುವಟಿಕೆಗಳನ್ನು ಹೇಗೆ ನಡೆಸುತ್ತಿದ್ದಾರೆ? ಅದನ್ನು ಕೇಂದ್ರವನ್ನಾಗಿ ಮಾಡಿಕೊಂಡಿದೆ? ಅಧಿಕಾರಿಗಳು ವರದಿಯನ್ನು ಬೇರೆ ಬೇರೆ ಸಂದರ್ಭದಲ್ಲಿ ಕೊಟ್ಟಿದ್ದಾರೆ. ಸರ್ಕಾರಕ್ಕೆ ಸಂಪೂರ್ಣವಾದಂತಹ ಮಾಹಿತಿ ಕೊಟ್ಟಿದ್ದಾರೆ. ಅಲ್ಲಿ ಇಲಾಖೆಯಿಂದ ತನಿಖೆ ಮಾಡಿದಾಗ ಏಕೆ47 ಸಿಕ್ಕಿದೆ.

ಅಧ್ಯಕ್ಷರು :— ವರದಿಯನ್ನು ಯಾವಾಗ ಮಂಡಿಸುತ್ತೀರಿ ಎಂದು ಕೇಳಿ. ಡೀಟೇಲ್ಸ್‌ಗೆ ಏಕೆ ಹೋಗುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಈ ವರದಿಯನ್ನು ಸರ್ಕಾರ ಬಹಿರಂಗಪಡಿಸದೇ ಇರುವುದಕ್ಕೆ ಕಾರಣ ಏನಾಯಿತು ಅಂದರೆ ನಮ್ಮ ವಿಧಾನಸಭೆಯ ಶಾಸಕರು ಆಗಿದ್ದಂತಹ ಡಾ: ಚಿತ್ತರಂಜನ್ ಅವರ ಕೊಲೆ ಆಯಿತು? ಇದರಲ್ಲಿ ಎರಡು ವಿಚಾರ ಇದೆ. ವರದಿಯನ್ನು ಮಂಡಿಸಿದ್ದರೆ, ಸರ್ಕಾರ ಕ್ರಮ ಕೈಗೊಂಡಿದ್ದರೆ, ಡಾ: ಚಿತ್ತರಂಜನ್ ಅವರ ಹತ್ಯೆ ಆಗುತ್ತಿರಲಿಲ್ಲ.

ಅಧ್ಯಕ್ಷರು :— ಆ ಡೀಟೇಲ್ಸ್ ಮಾತನಾಡಬೇಕು ಎಂದು ಹೇಳಿ ನೀವು ವರದಿ ಬಗ್ಗೆ ಮಾತನಾಡುತ್ತಿದ್ದೀರಿ. ಬೇಗನೇ ಮಂಡಿಸಿ ಎಂದು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ನಮ್ಮ ಜಿಲ್ಲೆಯ ಜನ ಆಕ್ರೋಶಗೊಂಡಿದ್ದಾರೆ. ಅದಕ್ಕೋಸ್ಕರ ನಾನು ಹೇಳುತ್ತಿರುವುದು ಭಟ್ಕಳದ ಶಾಸಕರಾಗಿದ್ದ ಡಾ: ಚಿತ್ತರಂಜನ್‌ರವರ ಹತ್ಯೆಯಾದ ಬಳಿಕ ಸರ್ಕಾರ ರಾಮಚಂದ್ರಯ್ಯ ಆಯೋಗವನ್ನು ನೇಮಿಸಿತು. ಸದರಿ ಆಯೋಗ ಪ್ರಕರಣದ ವಿಚಾರಣೆ ನಡೆಸಿ ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿ ಮೂರು ವರ್ಷಗಳಾಯಿತು.

ಶ್ರೀ ಡಿ.ಬಿ. ಚಂದ್ರೇಗೌಡ :— ಅದರಲ್ಲಿ ಪಾರದರ್ಶಕತೆ ಬರಬೇಕೆಂದರೆ ಅಥವಾ ಇದರ ಚರ್ಚೆ ಮಾಡಬೇಕೆಂದರೆ ಆಯೋಗದ ವರದಿ ಸದನದ ಸ್ವತ್ತು ಆದ ನಂತರವೇ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ತಾವು ಏಕೆ ಆಯೋಗದ ವರದಿಯನ್ನು ಸದನದ ಮುಂದೆ ಮಂಡಿಸಲಿಲ್ಲ ಎನ್ನುವುದೇ ನನ್ನ ಆಕ್ಷೇಪವಾಗಿದೆ.

ಅಧ್ಯಕ್ಷರು :— ತಾವು ಆ ಕುರಿತಾದ ವಿವರಗಳಿಗೆ ಹೋಗಬಾರದು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:— ಇಂತಹ ಗಂಭೀರ ಪ್ರಕರಣದ ಬಗ್ಗೆ ಜಗನ್ನಾಥಶೆಟ್ಟಿ ಮತ್ತು ರಾಮಚಂದ್ರಯ್ಯನವರ ನೇತೃತ್ವದಲ್ಲಿ ಎರಡು ಆಯೋಗಗಳು ನೇಮಕವಾಗಿ ಸರ್ಕಾರಕ್ಕೆ ವರದಿ ಕೊಟ್ಟು ಮೂರು ವರ್ಷವಾದರೂ ಸಹ...

ಶ್ರೀ ಜಗದೀಶ್ ಶೆಟ್ಟರ್:— ಸನ್ಮಾನ್ಯ ಅಧ್ಯಕ್ಷರೆ, ಕಳೆದ ಅಧಿವೇಶನದ ಕಲಾಪದ ಸಂದರ್ಭದಲ್ಲಿ ನಾವು ಇದರ ಬಗ್ಗೆ ಪ್ರಸ್ತಾಪಿಸಿದ್ದೆವು. ಕಂಬಾಲಪಲ್ಲಿ ದುರ್ಘಟನೆ ಕುರಿತು ನಡೆದಂಥ ಚರ್ಚೆಯ ಕಾಲದಲ್ಲಿ ಇದರ ಬಗ್ಗೆಯೂ ಪ್ರಸ್ತಾಪವಾಯಿತು. ಕಾನೂನು ಏನು ಹೇಳುತ್ತದೆಂದರೆ, ಯಾವುದೇ ಒಂದು ವರದಿ ಸರ್ಕಾರದ ಸುಪರ್ದಿಗೆ ಬಂದ ನಂತರ ಸರ್ಕಾರ ಅದನ್ನು ಆರು ತಿಂಗಳೊಳಗಾಗಿ ಸದನದಲ್ಲಿ ಮಂಡಿಸಬೇಕಲ್ಲದೆ, ವರದಿ ಮೇಲೆ ಕೈಗೊಂಡಿರುವ ಕ್ರಮಗಳ ಕುರಿತು ಹೇಳಬೇಕು. ಆಯೋಗದ ವರದಿ ಬಂದನಂತರ ಅದರ ಮೇಲೆ ಏನು ಕ್ರಮ ಕೈಗೊಳ್ಳಬೇಕು, ಕೈಗೊಳ್ಳಬಾರದು ಮುಂತಾದ ವಿಷಯಗಳೆಲ್ಲವೂ ಸರ್ಕಾರಕ್ಕೆ ಬಿಟ್ಟಿದ್ದು. ಆದರೆ, ಆರು ತಿಂಗಳೊಳಗೆ ಸರ್ಕಾರ ಅದರ ಬಗ್ಗೆ ಹೇಳಬೇಕು. ಈ ಪ್ರಕರಣದಲ್ಲಿ ಏನಾಗಿದೆಯೆಂದರೆ, ದಿನಾಂಕ 29-2-97ರಂದು ಆಯೋಗ ಸರ್ಕಾರಕ್ಕೆ ವರದಿ ಕೊಟ್ಟಿದ್ದರೂ ಸದನದ ಮುಂದೆ ಅದನ್ನು ಇದುವರೆವಿಗೂ ಏಕೆ ಮಂಡಿಸಲಿಲ್ಲ? ಎನ್ನುವುದು ಪ್ರಶ್ನೆಯಾಗಿದೆ. ನನ್ನ ತಿಳಿವಳಿಕೆ ಪ್ರಕಾರ ವರದಿ ಬಹುಶಃ ಬಹಿರಂಗವಾಗಿದ್ದರೆ, ಅದು ಸದನದ ಸ್ವತ್ತಾಗಿದ್ದರೆ, ರಾಜ್ಯದಲ್ಲಿ ಇತ್ತೀಚೆಗೆ ಕೆಲವೊಂದು ಹಿಂಸಾತ್ಮಕ ಘಟನೆಗಳು ಜರುಗಿದವು. ಆರು ಚರ್ಚೆಗಳಲ್ಲಿ ಬಾಂಬ್ ಸ್ಫೋಟಿಸುವುದಾಗಿರಬಹುದು, ಐಎಸ್‌ಐ ಚಟುವಟಿಕೆ ಬಗ್ಗೆ ಇರಬಹುದು, ಇನ್ನಿತರ ದುಷ್ಕೃತ್ಯಗಳಿಂದ ದುರ್ಘಟನೆಗಳಾಗಿರಬಹುದು, ಆ ಆಯೋಗದ ವರದಿ ಇವೊತ್ತು ಬಹಿರಂಗಗೊಂಡಿದ್ದರೆ ಇವೆಲ್ಲ ಘಟನೆಗಳ ಮೇಲೂ ಬೆಳಕು ಚೆಲ್ಲಲು ಸಾಧ್ಯವಿತ್ತು.

ಈ ಅಧಿವೇಶನ ಮುಗಿಯುವುದರೊಳಗಾಗಿ ಆ ವರದಿಯನ್ನು ನಾವು ಸದನದಲ್ಲಿ ಮಂಡಿಸುತ್ತೇವೆ. ಎಂದು ಹಿಂದಿನ ಅಧಿವೇಶನದ ಸಂದರ್ಭದಲ್ಲಿ ವಚನ ಕೊಟ್ಟಿದ್ದಿರಿ. ಆದರೆ, ಅಧಿವೇಶನದ ಅವಧಿ ನಾಲ್ಕೈದು ದಿವಸಗಳ ಕಾಲ ಮೊಟಕುಗೊಂಡು ಮುಂಚೆಯೇ ಅನಿರ್ಧಿಷ್ಟಾವಧಿಯವರೆಗೆ ಮುಂದೂಡಿದ್ದರಿಂದ ನಾವು ಆ ಕುರಿತು ಸರ್ಕಾರವನ್ನು ಪ್ರಶ್ನಿಸುವುದಕ್ಕಾಗಿಲ್ಲ, ವಿಷಯ ಹಾಗೇ ಉಳಿಯಿತು. ಆದುದರಿಂದ, ಈಗ ಪ್ರಶ್ನೆ ಇರುವುದೇನೆಂದರೆ, ವರದಿಯನ್ನು ಸದನದ ಮುಂದಿಡುತ್ತೇವೆಂದು ಏನು ವಚನ ಕೊಟ್ಟಿದ್ದಿರಿ, ಅದನ್ನು ನೀವು ಪಾಲಿಸಲಿಲ್ಲ. ಇದು ಬಹಳ ಮಹತ್ವವಾದ ವರದಿಯಾಗಿದೆ. ಸರ್ಕಾರದ ಮುಂದೆ ಎಷ್ಟೋ ಆಯೋಗಗಳ ವರದಿಗಳಿವೆ, ಅವೆಲ್ಲವನ್ನೂ ನಾವು ಕೇಳುತ್ತಿಲ್ಲ. ಬಹಳಷ್ಟು ಆಯೋಗಗಳ ವರದಿಗಳು ಇವೊತ್ತು ಕಸದ ಬುಟ್ಟಿಯಲ್ಲಿವೆ. ಇವೊತ್ತು ನಾನು ಸರ್ಕಾರವನ್ನು ಕೇಳುತ್ತಿರುವುದೇನೆಂದರೆ, ಆಯೋಗ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಆರು ತಿಂಗಳೊಳಗಾಗಿ ಸದರಿ ವರದಿಯನ್ನು ಸರ್ಕಾರ ಸದನದ ಮುಂದೆ ಏಕೆ ಮಂಡಿಸಲಿಲ್ಲ? ಮತ್ತು ವರದಿ ಮೇಲೆ ಕೈಗೊಂಡ ಕ್ರಮಗಳ ಕುರಿತು ಏಕೆ ಹೇಳಲಿಲ್ಲ? ವರದಿಯನ್ನು ಸದನದ ಮುಂದೆ ಯಾವಾಗ ಮಂಡಿಸುತ್ತೀರಿ? ಎಂಬುದನ್ನು ತಿಳಿಸಬೇಕು.

ಶ್ರೀ ಕೆ.ಎಚ್. ರಂಗನಾಥ್ (ಮಾನ್ಯ ಅರಣ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡುತ್ತಾ ಭಟ್ಕಳದ ಶಾಸಕರಾಗಿದ್ದ ಡಾ: ಚಿತ್ತರಂಜನ್‌ರವರ ಕೊಲೆ ಪ್ರಕರಣದ ಹಿನ್ನೆಲೆಯಲ್ಲಿ ಸರ್ಕಾರ ನೇಮಿಸಿದ್ದ ರಾಮಚಂದ್ರಯ್ಯನವರ ಆಯೋಗ 1997ರಲ್ಲಿ ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿದೆಯೆಂದು ಹೇಳಿದ್ದನ್ನು ಕೇಳಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರು ಮಾತನಾಡುತ್ತಾ "within six months it should have been made public" ಎಂದು ಹೇಳುತ್ತಿದ್ದಾರೆ. ಬಹಳ ಮಟ್ಟಿಗೆ ಇದರ ಬಗ್ಗೆ ಹಿಂದಿನ ಸರ್ಕಾರ ಪ್ರಸ್ತಪಿಸಿರಬಹುದೇನೋ ಗೊತ್ತಿಲ್ಲ. ಇದರ ಬಗ್ಗೆ ಈ ತಕ್ಷಣಕ್ಕೆ ಸರ್ಕಾರ ಉತ್ತರ ಕೊಡುವುದಕ್ಕೆ ಕಷ್ಟವಾಗುತ್ತದಾದ್ದರಿಂದ ಸದರಿ ಪ್ರಕರಣದ ಬಗ್ಗೆ ಏನೇನಾಗಿದೆಯೆಂಬ ಬಗ್ಗೆ ಕಡತ ನೋಡಿ ಹೇಳುವುದಕ್ಕೆ ಅಧ್ಯಕ್ಷರಾದ ತಾವು ಸರ್ಕಾರಕ್ಕೆ ಸ್ವಲ್ಪ ಸಮಯ ಕೊಡಬೇಕಾಗುತ್ತದೆ. ಆಯೋಗದ ವರದಿ ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿ ಮೂರು ವರ್ಷಗಳ ಮೇಲಾಗಿರುವುದರಿಂದ ಈ ಕುರಿತ ದಾಖಲೆಯನ್ನು ತೆಗೆದು ನೋಡಿ ಸರ್ಕಾರ ಯಾವ ತೀರ್ಮಾನಕ್ಕೆ ಬಂದಿತ್ತು? ಒಂದು ವೇಳೆ ತೀರ್ಮಾನಕ್ಕೆ ಬಂದಿದ್ದರೆ ಆ ಕುರಿತು ಪುನರ್‌ಪರಿಶೀಲಿಸುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ? ಇಲ್ಲವೇ? ಎಂಬುದನ್ನೆಲ್ಲವನ್ನೂ ಕೂಲಂಕುಷವಾಗಿ ನೋಡಬೇಕಾಗುತ್ತದೆ. ಸದನದಲ್ಲಿ ನಾವು ತಪ್ಪು ಮಾಡುವುದು ಸರಿಯಲ್ಲ. ಇದರಲ್ಲಿ ಮುಚ್ಚಿಡುವ ಅಗತ್ಯವೂ ಇಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸಭೆಯ ಮುಂದಿಡುವುದಕ್ಕೆ ತಾವು ಸರ್ಕಾರಕ್ಕೆ ಸ್ವಲ್ಪ ಸಮಯಾವಕಾಶ ಕಲ್ಪಿಸಿಕೊಡುವುದು ಒಳ್ಳೆಯದೆಂದು ನನ್ನ ವಿನಂತಿಯಾಗಿದೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಕಳೆದ ಬಾರಿ ಅಧಿವೇಶನ ನಡೆದಂಥ ಸಂದರ್ಭದಲ್ಲಿ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಸಲ್ಲಿಸುವ ಚರ್ಚೆಯಲ್ಲಿ ಪಾಲ್ಗೊಂಡು ಆಯೋಗಗಳ ವರದಿ ಬಗ್ಗೆ ಪ್ರಸ್ತಾಪಿಸಿದೆ. ಆ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳು ತಕ್ಷಣ ಪ್ರತಿಕ್ರಿಯಿಸಿದ್ದು ಏನೆಂದರೆ, ವರದಿ ಬಗ್ಗೆ ನಾನು ತಕ್ಷಣ ಗಮನಹರಿಸಿ ಅದನ್ನು ಸದನದ ಮುಂದಿಡುತ್ತೇನೆಂದರು. ಅದು ಪತ್ರಿಕೆಗಳಲ್ಲಿ ವರದಿಯಾಯಿತು. ವರದಿ ಈ ರೀತಿ ಇದೆ. ಕಾರವಾರ ಜಿಲ್ಲೆಯ ಭಟ್ಕಳದಲ್ಲಿ ನಡೆದ ಚಿತ್ತರಂಜನ್ ರವರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಗನ್ನಾಥಶೆಟ್ಟಿ ಮತ್ತು ರಾಮಚಂದ್ರಯ್ಯನವರ ನೇತೃತ್ವದ ಆಯೋಗದ ವರದಿಗಳನ್ನು ಪ್ರಸಕ್ತ ಅಧಿವೇಶನ ಮುಗಿಯುವುದರೊಳಗಾಗಿ ಸದನದಲ್ಲಿ ಮಂಡಿಸುವುದಾಗಿ ಸರ್ಕಾರ ಮಂಗಳವಾರ ವಿಧಾನಸಭೆಯಲ್ಲಿ ಪ್ರಕಟಿಸಿತು ಇದು ಪತ್ರಿಕೆಯ ಮಾರ್ಚ್ 21ನೇ ತಾರೀಖಿನ ವರದಿಯಾಗಿದೆ. ವರದಿಯನ್ನು ಮಂಡಿಸಬೇಕೆಂದು ನಾವು ಸರ್ಕಾರವನ್ನು ಏಕೆ ಒತ್ತಾಯಿಸುತ್ತಿರುವುದೆಂದರೆ, ಮಾನ್ಯ ಗೃಹ ಸಚಿವರಿಗೆ ಬಹುಶಃ

ಗೊತ್ತಿರಬೇಕು. ಒಂದು ವಾರದ ಹಿಂದೆ ಭಟ್ಕಳದಲ್ಲಿ ಸುಮಾರು 5,000-6000 ಜನರನ್ನೊಳಗೊಂಡ ಒಂದು ದೊಡ್ಡ ರ್ಯಾಲಿ ನಡೆಯಿತು. ಆ ಭಾಗದಲ್ಲಿ, ಕೊಲೆ ಪ್ರಕರಣದಂಥ ದುಷ್ಕೃತ್ಯಗಳು ನಿರಂತರವಾಗಿ ನಡೆಯುತ್ತಿರುವುದರಿಂದ ಜಗನ್ನಾಥಶೆಟ್ಟಿ ಮತ್ತು ರಾಮಚಂದ್ರಯ್ಯನವರ ಆಯೋಗಗಳ ವರದಿಗಳ ಮೇಲೆ ಸರ್ಕಾರ ಕ್ರಮಗಳನ್ನು ಕೈಗೊಳ್ಳದೆ ಏಕೆ ನಿಷ್ಕ್ರಿಯವಾಗಿದೆ ಎಂಬ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಲು ದೊಡ್ಡ ಪ್ರತಿಭಟನಾ ರ್ಯಾಲಿ ಜರುಗಿತು. ಮಾನ್ಯ ಶಾಸಕರು ಕೂಡ ಅದೇ ಸಂದರ್ಭದಲ್ಲಿ, ಸದನದಲ್ಲಿ ಈ ಕುರಿತು ಪ್ರಸ್ತಾಪಿಸಬೇಕೆಂದು ನಿಶ್ಚಯಿಸಿ ಸೂಚನಾ ಪತ್ರ ಕಳುಹಿಸಿಕೊಟ್ಟಾಗ ಸದನದ ನಿಯಮಾವಳಿಯ ಬೇರೆ ವಿಧಿ-ವಿಧಾನದಲ್ಲಿ, ಅದನ್ನು ಕೈಬಿಡಿಸಿಕೊಂಡಾಗ ಅನಿವಾರ್ಯವಾಗಿ ಸದನದಲ್ಲಿ ಪ್ರಸ್ತಾಪಿಸುವುದಕ್ಕಾಗಿಲ್ಲ. ನಮ್ಮ ಕಾಳಜಿ ಏನೆಂದರೆ, ಆಯೋಗಗಳು ತಮ್ಮ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದ ಬಳಿಕ ಅಮೂಲಾಗ್ರವಾಗಿ ಸರ್ಕಾರ ಚಿಂತಿಸಿ ವರದಿ ಮೇಲೆ ಕೈಗೊಂಡ ಕ್ರಮಗಳ ಕುರಿತು ಸದನದಲ್ಲಿ ಮಂಡಿಸಿ ಕರ್ನಾಟಕ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಬಲಗೊಳಿಸಿ ಭಟ್ಕಳದಂಥ ಭಾಗದಲ್ಲಿ ಜರುಗುತ್ತಿದ್ದಂಥ ಐಎಸ್‌ಐ ಕಾರ್ಯಚಟುವಟಿಕೆಗಳನ್ನು ನಿಷೇಧಿಸುವುದಕ್ಕೆ ಸಾಧ್ಯವಿತ್ತು ಮತ್ತು ಕೋಮು ಗಲಭೆಗಳನ್ನೂ ಹತ್ತಿಕ್ಕುವುದಕ್ಕೆ ಸಹಕಾರಿಯಾಗುತ್ತಿತ್ತು.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಆಯೋಗದ ವರದಿಯೇ ಇನ್ನೂ ಅಂಗೀಕಾರವಾಗಿಲ್ಲ, ನಿಮಗೆ ಹೇಗೆ ಗೊತ್ತಾಯಿತು?

ಶ್ರೀ ಡಿ.ವಿ. ಸದಾನಂದಗೌಡ :— ಆ ಕುರಿತು ಪತ್ರಿಕೆಗಳಲ್ಲಿ ವರದಿಯಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ಕೊಟ್ಟಾಗ ಸರ್ಕಾರ ಅದನ್ನು ಕೂಲಂಕುಷವಾಗಿ ಪರಿಶೀಲಿಸಿ ಅದನ್ನು ಅಂಗೀಕರಿಸಬೇಕೇ? ತಿರಸ್ಕರಿಸಬೇಕೇ? ಎಂಬುದರ ಬಗ್ಗೆ ಕೈಗೊಂಡಕ್ರಮಗಳ ವರದಿಯನ್ನು ನಾವು ಸದನದ ಮುಂದಿಡುತ್ತೇವೆ. ಅದರ ಬಗ್ಗೆ ತಮಗೆ ಗೊತ್ತಾಗಬೇಕಾದರೆ ಆಯೋಗದವರು ತಮಗೆ ಹೇಳಿದರೇ? ಇಲ್ಲವೇ ನಿಮಗೂ ಅವರಿಗೂ ಸಂಪರ್ಕವಿದೆಯೇ? ಹೇಗೆ? ಎಂಬುದು ನಮಗೆ ಗೊತ್ತಾಗುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :— ಪತ್ರಿಕೆಗಳಲ್ಲಿ ಆಯೋಗದ ವರದಿ ಬಗ್ಗೆ ಕೆಲವೊಂದು ಸುಳಿವು ನೀಡಿದ್ದರು. ಪತ್ರಿಕೆಯ ವರದಿ ಆಧಾರದ ಮೇಲೆಯೇ ನಾವು ಕೇಳುತ್ತಿದ್ದೇವೆ.

ಶ್ರೀ ಡಿ.ವಿ. ಸದಾನಂದ ಗೌಡ :— ಈಗಿನ ಅಧಿವೇಶನದ ಸಂದರ್ಭದಲ್ಲಿ ಈ ಕುರಿತು ನಾನು ಪ್ರಸ್ತಾಪಿಸಿದಾಗ ಸರ್ಕಾರ ನೇರವಾಗಿ ನಮಗೆ ಉತ್ತರ ಕೊಟ್ಟಿದೆ.

ಆಯೋಗವು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ಆರು ತಿಂಗಳೊಳಗೆ ಆ ಕುರಿತು ಸರ್ಕಾರ ಕೈಗೊಂಡಿರುವ ಕ್ರಮವನ್ನು ನೋಡುವುದಕ್ಕಾಗಿರುವುದಿಲ್ಲವೆಂದಾಗ, ಆಯೋಗವು ಸರ್ಕಾರಕ್ಕೆ ವರದಿ ಸಲ್ಲಿಸಿದೆಯೆಂದು ತಾವು ಉತ್ತರಿಸಿದ್ದೀರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಆಯೋಗದ ವರದಿಯನ್ನು ಸರ್ಕಾರ ಸಚಿವ ಸಂಪುಟದ ಸಭೆ ಮುಂದಿಟ್ಟು ಅಲ್ಲಿ ಅಂಗೀಕಾರವಾದ ನಂತರವೇ ಸದನದ ಮುಂದಿಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ :— ನಾವು ಇವೊತ್ತು ಅದನ್ನೇ ಪ್ರಶ್ನಿಸುತ್ತಿರುವುದು. ವರದಿ ಮೇಲೆ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ತಿಳಿಸಬೇಕಾಗುತ್ತು. ಇದನ್ನು ಮಾಡುವುದರಲ್ಲಿ ಸರ್ಕಾರ ವಿಫಲವಾಗಿದೆಯೆಂದು ಹೇಳುತ್ತಿದ್ದೇನೆ. ಮತ್ತು ಇದನ್ನು ಮಾಡುವುದಕ್ಕೆ ಸರ್ಕಾರಕ್ಕೆ ಇಚ್ಛೆಯೂ ಇದ್ದಂತಿಲ್ಲ.

SRI D.B.CHANDREGOWDA (Law and Parliamentary Affairs Minister) :— I will draw the attention of the House to Section 3(4). It is not mandatory on the part of the government. Non-placing of the report of the Commission before the Legislature within a prescribed time does not result in considering the report void. ಹಿಂದಿನ ಸರ್ಕಾರ ಕೂಡ ಅನೇಕ ಸಕಾರಣಗಳಿಂದಲೇ ಸದನದಲ್ಲಿ ಅದನ್ನು ಮಂಡಿಸುವುದಕ್ಕೆ ಎರಡು ವರ್ಷ ಕಾಲ ತಡೆಹಿಡಿದಿರಬಹುದು. ಕಾರಣಗಳು ಇಲ್ಲದಿಲ್ಲ. ಇದರ ಬಗ್ಗೆ ಈಗಷ್ಟೆ ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸದಸ್ಯರು ಪ್ರಸ್ತಾಪಿಸಿರುವುದರಿಂದ ಇದಕ್ಕೆ ಈಗಾಗಲೇ ಇಬ್ಬರು ಹಿರಿಯ ಮಾನ್ಯ ಸಚಿವರು ಹೇಳಿರುವಂತೆ ಇದರ ಬಗ್ಗೆ ಸರ್ಕಾರ ತನ್ನ ಗಮನಹರಿಸಿ, ವಿಷಯವನ್ನು ಸಚಿವ ಸಂಪುಟದ ಸಭೆ ಮುಂದಿಟ್ಟು ಈ ದಿಸೆಯಲ್ಲಿ ಏನೇನು ಮಾಡಬಹುದು ಎಂಬುದನ್ನು ಆಲೋಚಿಸುವುದಕ್ಕೆ ಸ್ವಲ್ಪ ಸಮಯಾವಕಾಶ ನೀಡಬೇಕೆಂದು ತಮ್ಮಲ್ಲಿ ಕೋರುತ್ತೇನೆ.

ಅಧ್ಯಕ್ಷರು :— ಈಗ ಸದನದ ಕಲಾಪವನ್ನು ಮುಂದೂಡಿ ಮತ್ತೆ ಸೋಮವಾರದಂದು ಬೆಳಿಗ್ಗೆ 11-00ಗಂಟೆಗೆ ಸೇರುವುದು.

(ಸದನವು ಮಧ್ಯಾಹ್ನ ಒಂದು ಗಂಟೆ 59 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 20ನೇ ಸೋಮವಾರ 2000 ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು.)

+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮುದ್ರಕರು : ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು,
ಸಶಾಮು. ತುಮಕೂರು, ಕಾಸೂ. 117 - 350 ಪುಸ್ತಕಗಳು ದಿ: 31-07-2002.